ಕಾಲೇಜಿಗೆ ಓಡಿಕೊಂಡೇ ಹೋಗುವುದು. ಆರೂವರೆಗೆಲ್ಲ ಪ್ರಾರಂಭವಾಗುವ ತರಗತಿಗೆ ಸಮಯಕ್ಕೆ ಸರಿಯಾಗಿ ಹೋಗಬೇಕಲ್ಲ.

ಕಾಲೇಜಿನಲ್ಲಿ ಎರಡನೆಯ ವರ್ಷದಲ್ಲಿರುವಾಗ ಅಂಗಡಿಯೊಂದರಲ್ಲಿ ಲೆಕ್ಕ ಬರೆಯುವ ಕೆಲಸ ಸಿಕ್ಕಿತ್ತು. ಮೂಲತಃ ಅವನ ಊರಿನವರೇ ಆದರೂ ಇಲ್ಲಿ ಬಂದು ಬಹುಕಾಲವೇ ಆಗಿತ್ತಾದ್ದರಿಂದ ಅವರಾಡುವ ಹರಕು ಭಾಷೆಯ ಮಾತೊಂದು ಬಿಟ್ಟರೆ ಊರಿನ ಬೇರೆ ಯಾವುದೇ ಲಕ್ಷಣಗಳೂ ಉಳಿದಿರಲಿಲ್ಲ. ಅದೇ ಅವರನ್ನು ಜೊತೆ ಮಾಡಿದ್ದು. ದಿನಕ್ಕೆರಡು ಗಂಟೆ ಎಂದು ಪ್ರಾರಂಭವಾದದ್ದು ಇವನ ಕೆಲಸ ನೋಡಿ ನಾಲ್ಕಕ್ಕೇರಿಸಿದ್ದರು. ಮತ್ತೆ ಕೆಲವೇ ದಿನಗಳಲ್ಲಿ ಅವರದೇ ಆದ ಇನ್ನೊಂದು ಅಂಗಡಿಯಲ್ಲಿ ಇನ್ನೆರಡು ಗಂಟೆ ಕೆಲಸ ಕೊಟ್ಟಿದ್ದರು. ಹಾಗೆಯೇ ಅಂಗಡಿಯ ಹಿಂದಿರುವ ಚಿಕ್ಕ ರೂಮೊಂದರಲ್ಲಿ ವಾಸಕ್ಕೂ ಅನುಕೂಲ ಮಾಡಿಕೊಟ್ಟಿದ್ದರು. ಮೂಲತಃ ಅಂಗಡಿಯ ಚಿಕ್ಕ ಪುಟ್ಟ ಸಾಮಾನುಗಳನ್ನಿಡುವ ಗೋಡೌನೇ ಆಗಿದ್ದರೂ ಅವನಿದ್ದ ಜೋಪಡಿಗಿಂತ ವಾಸಿ ಎನಿಸಿದ್ದರಿಂದ ಕೂಡಲೇ ವಾಸ್ತವ್ಯವನ್ನು ಬದಲಾಯಿಸಿದ್ದ. ಜೊತೆಗೆ ಅಂಗಡಿಯ ಯಜಮಾನನೇ ಕೊಟ್ಟ ಹಳೆಯ ಸ್ಟೌ ಒಂದನ್ನು ಇಟ್ಟುಕೊಂಡು ತನ್ನ ಕೂಳನ್ನು ತಾನೇ ಬೇಯಿಸಿಕೊಳ್ಳಲೂ ತೊಡಗಿದ್ದ.

ಅಲ್ಲಿಂದಲೇ ಅವನ ಜೀವನದಲ್ಲಿ ಬೆಳಕು ಕಾಣಲಾರಂಭಿಸಿದ್ದು. ಯಜಮಾನ ಸಂಬಳಕ್ಕೇನೂ ಮೋಸ ಮಾಡುತ್ತಿರಲಿಲ್ಲ. ಊಟ ತಿಂಡಿಗಳಿಗೆ ಖರ್ಚು ಮಾಡಿ ಕಾಲೇಜಿನ ಫೀಸು ಪುಸ್ತಕಗಳಿಗೂ ಸಾಕಾಗುವಷ್ಟು ಕೊಡುತ್ತಿದ್ದ. ಬದುಕಿನಲ್ಲಿ ಮೊದಲನೆಯ ಬಾರಿಗೆ ಒಂದು ತೆರನ ನೆಮ್ಮದಿಯನ್ನು ಕಂಡುಕೊಂಡದ್ದು ಆಗಲೇ.

ವರ್ಷಗಳು ಕಳೆದು ಡಿಗ್ರಿ ಮುಗಿಸಿದವ ಪರೀಕ್ಷೆಗಳನ್ನು ಪಾಸು ಮಾಡಿ ಬ್ಯಾಂಕಿನಲ್ಲಿ ಕೆಲಸಕ್ಕೂ ಸೇರಿಕೊಂಡಿದ್ದ. ಆಗಲೇ ತನ್ನೊಂದಿಗೆ ಕೆಲಸ ಮಾಡುವುದನ್ನು ನಿಲ್ಲಿಸಿದ್ದರೂ ಗೋಡೌನ್ ತೆರನ ರೂಮಿನಲ್ಲಿ ಇನ್ನೂ ಅವನನ್ನು ಬಿಟ್ಟುಕೊಂಡಿದ್ದ ಯಜಮಾನ ತನ್ನ ಮಗಳನ್ನು ಮದುವೆ ಮಾಡಿಕೊಡುವ ಪ್ರಸ್ತಾವವನ್ನು ಮಾಡಿದ್ದು. ಅವ ಒಪ್ಪಿರಲಿಲ್ಲ. ನಯವಾಗಿಯೇ ತಿರಸ್ಕರಿಸಿದ್ದ. ಅವರ ಯೋಗ್ಯತೆಗೆ ತಾನು ಅಳವಲ್ಲ ಎನ್ನುವ ಕಾರಣ ಹೇಳಿದ್ದರೂ ಅವನನ್ನು ಬೇಡ ಎನ್ನುವಂತೆ ಮಾಡಿದ್ದು ಮನಸ್ಸಿನ ಮೂಲೆಯಲ್ಲಿಯೇ ಕುಳಿತಿದ್ದು ಈಗ ಪುನಃ ಚಿಗುರಲು ತೊಡಗಿದ್ದ ತನ್ನೂರಿನ ಆ ಹುಡುಗಿಯ ನೆನಪೇ. ಮಾರನೆಯ ವರ್ಷವೇ ಉದ್ಯೋಗದಲ್ಲಿ ಬಡ್ತಿ ಪಡೆದು ಬೇರೆ ಊರಿಗೆ ವರ್ಗವಾಗಿ ಹೋದದ್ದರಿಂದ ಆ ಯಜಮಾನನೂ ಆ ವಿಷಯವನ್ನು ಮುಂದುವರಿಸಿರಲಿಲ್ಲ.

★★★

ಮುಂದೆ ಅವನು ಹಿಂದಿರುಗಿ ನೋಡಿದ್ದೆಂಬುದೇ ಇಲ್ಲ. ಅಷ್ಟು ದಿನಗಳ ವರೆಗೆ ಹುದುಗಿ ಹೋಗಿದ್ದ ಅವನ ಪ್ರತಿಭೆ ಒಮ್ಮೆಗೇ ಸ್ಫೋಟಗೊಂಡಿತೇನೋ ಎನ್ನುವಂತೆ ಉದ್ಯೋಗದಲ್ಲಿ ಮೇಲೇರಿದ್ದ. ಆಫೀಸರ್, ಶಾಖೆಯ ಮ್ಯಾನೇಜರ್, ವಿಭಾಗದ ಮ್ಯಾನೇಜರ್, ವಲಯಾಧಿಕಾರಿ ಹೀಗೆ... ಅವನು ಮೇಲೇರುವ ವೇಗ, ಬ್ಯಾಂಕಿನಲ್ಲಿ ಅವನಿಗಿರುವ ಹೆಸರು ಅವನೆಡೆಗೆ ಎಲ್ಲರೂ ಆಕರ್ಷಿತರಾಗುವಂತೆ ಮಾಡಿದ್ದೂ ಸಹಜ. ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದ ಇನ್ನೂ ಮದುವೆಯಾಗದ ಹೆಣ್ಣು ಮಕ್ಕಳಂತೂ ಮುಗಿಬೀಳುತ್ತಿದ್ದರು. ಆಗೆಲ್ಲ ಇವನಿಗೆ ನೆನಪಾಗುತ್ತಿದ್ದುದು ಊರಲ್ಲಿದ್ದ ಅವನ ಗೆಳತಿ.

ಒಮ್ಮೆಯಂತೂ ಹಿರಿಯ ಹುದ್ದೆಯಲ್ಲಿದ್ದ ಅವನನ್ನು ಮೂವತ್ತು ಕಳೆದರೂ ಇನ್ನೂ ಅವಿವಾಹಿತೆಯಾಗಿದ್ದು ಸುಂದರಿಯೂ ಆಗಿದ್ದ ಅವನ ಸೆಕ್ರೆಟರಿಯೇ ಮೋಹಿಸಿದ್ದಳು. ಏನೋ ಡಿಕ್ಟೇಶನ್ ತೆಗೆದುಕೊಳ್ಳುವ ಹೆಳೆಯಲ್ಲಿ ಒಬ್ಬನೇ ಕುಳಿತಿದ್ದ ಇವನ ಕೋಣೆಯೊಳಗೆ ಬಂದ ಅವಳು